# ಕರ್ನಾಟಕ ವಿಕಾಸ

KARNATAKA VIKAS

ಡಿಸೆಂಬರ್
December 2013




## ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಗದಗ ಜಿಲ್ಲೆ ಕುರ್ತಕೋಟಿ ಗ್ರಾಮದಲ್ಲಿ ಆಟದ ಮೈದಾನ, ಕುರಿದೊಡ್ಡಿ ನಿರ್ಮಾಣ ಸೌಲಭ್ಯಗಳ ಉದ್ಘಾಟನೆ



# ಸುಗ್ರಾಮ

## — ಒಂದು ಕಿರು ಪರಿಚಯ

— ಶ್ರೀಮತಿ ಪದ್ಮಿನಿ ಅನಂತ್

ಲೇಖನ

**ಸುಗ್ರಾಮ** - ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ - ಕರ್ನಾಟಕವನ್ನು, 2010ರಲ್ಲಿ ಸಂಘಗಳ ನೋಂದಣಿ ಕಾಯ್ದೆಯನ್ವಯ ನೋಂದಾಯಿಸಲ್ಪಡಲಾಗಿದ್ದು, ಕರ್ನಾಟಕದ ಗ್ರಾಮಪಂಚಾಯತಿಗಳ ಚುನಾಯಿತ ಮಹಿಳಾ ಪ್ರತಿನಿಧಿಗಳ ಹಕ್ಕು ಮತ್ತು ಆಸಕ್ತಿಯನ್ನು ಪ್ರತಿನಿಧಿಸುತ್ತಿರುವ ಒಂದು ಸಂಘ. ಚುನಾಯಿತ ಮಹಿಳಾ ಪ್ರತಿನಿಧಿಗಳು, ಉತ್ತಮ ನೀತಿಗಳನ್ನು ವಕಾಲತ್ತು ಮಾಡುವುದು ಮತ್ತು ಬದಲಾವಣೆಗಳನ್ನು ತರುವಲ್ಲಿ ಐಕ್ಯಮತದಿಂದ ಒಟ್ಟಾಗಿ ಧನಿಗೂಡಿಸಲು ಸುಗ್ರಾಮ ಒಂದು ವೇದಿಕೆಯಾಗಿದೆ.

ಸುಗ್ರಾಮವು ಸದಸ್ಯತ್ವ ಆಧಾರಿತ ಸಂಘವಾಗಿದೆ. ಪ್ರಸಕ್ತವಾಗಿ 17 ಜಿಲ್ಲೆಗಳ 51 ತಾಲ್ಲೂಕುಗಳಲ್ಲಿ ಸುಗ್ರಾಮದ ತಾಲ್ಲೂಕು ಸಂಘಗಳನ್ನು ರಚಿಸಲಾಗಿದ್ದು, 3000 ಚುನಾಯಿತ ಮಹಿಳಾ ಸದಸ್ಯರ ಸದಸ್ಯತ್ವವನ್ನು ಹೊಂದಿದೆ.

ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡು ಸಮಾಜ ಪರಿವರ್ತಕರನ್ನಾಗಿ ಮಾಡುವಲ್ಲಿ "ಸುಗ್ರಾಮ" ಸಕ್ರಿಯವಾಗಿದೆ

ಉತ್ತಮ ಆಡಳಿತ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಪ್ರತಿನಿಧಿತ್ವವಷ್ಟೇ ಅಲ್ಲದೇ, ಸಕ್ರಿಯ ಮತ್ತು ಸಫಲ ನಾಯಕರಾಗಿ ಭಾಗವಹಿಸಲು ಸುಗ್ರಾಮದ ಸದಸ್ಯರು ಇತರ ಸದಸ್ಯರಿಗೆ ಸಹಕಾರ ನೀಡುತ್ತಿದ್ದಾರೆ. ಸದಸ್ಯರ ಸುಸ್ಥಿರ ಪ್ರಯತ್ನಗಳಿಂದ ಸುಗ್ರಾಮವು ಇಂದು ರಾಜ್ಯ ಮಟ್ಟದ ಸಂಘವಾಗಿ ಹೊರಹೊಮ್ಮಿದೆ. ಇದರಿಂದ, ಗ್ರಾಮ ಪಂಚಾಯತಿಯಲ್ಲಿನ ಚುನಾಯಿತ ಮಹಿಳಾ ಸದಸ್ಯರ ಸಂಘಟಿತ ಶಕ್ತಿಯನ್ನು



ಸುಗ್ರಾಮದ ರಾಜ್ಯ ಸಂಚಾಲನಾ ಸಮಿತಿ ಸದಸ್ಯರುಗಳು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತಿರುವುದು

ತೋರ್ಪಡಿಸುತ್ತದೆ. ಹಾಗೆಯೇ, ಚುನಾಯಿತ ಸದಸ್ಯರು ಸಮಾಜ ಪರಿವರ್ತಕರಾಗಿ ಮತ್ತು ಸ್ವಾವಾಲಂಬಿಗಳಾಗಿ, ಹಳ್ಳಿಯ/ ಪಂಚಾಯತಿಯ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಸುಗ್ರಾಮದ ಸದಸ್ಯರು ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಗಿದ್ದು, ಸಮುದಾಯದಲ್ಲಿನ ಎಲ್ಲಾ ವರ್ಗದವರಿಗೂ ಸರ್ಕಾರದ ಯೋಜನೆಗಳು ದೊರಕುವಂತೆ ಮಾಡುತ್ತಿದ್ದಾರೆ. ಹಾಗೆಯೇ, ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಕಾರ್ಯಗತವಾಗಿಸುವಂತಹ ನಿಟ್ಟಿನಲ್ಲಿ ತೊಡಗಿಸಿಕೊಂಡಿದ್ದಾರೆ.

ಇದಲ್ಲದೇ, ಸುಗ್ರಾಮದ ತಾಲ್ಲೂಕು ಸಭೆಗಳಲ್ಲಿ ತಮ್ಮ ಸವಾಲುಗಳನ್ನು ಮಂಡಿಸುತ್ತ, ಇತರ ಚುನಾಯಿತ ಮಹಿಳಾ ಸದಸ್ಯರ ಸಹಕಾರ ಹಾಗೂ ಬೆಂಬಲದೊಂದಿಗೆ ಐಕ್ಯಮತದಿಂದ ಧನಿಎತ್ತಿ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಸುಗ್ರಾಮದ ಸಾಧನೆಗಳು:

ಸುಗ್ರಾಮದ ಯಶಸ್ಸು ವ್ಯಾಪಕವಾಗಿದೆ. ಸುಗ್ರಾಮದ ಸದಸ್ಯರು ತಮ್ಮ ಸಂಘದ ಸಭೆಗಳಲ್ಲಿ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮಾಹಿತಿ ಸಂಗ್ರಹಿಸಿ, ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರಲ್ಲದೇ, ಇತರೆ, ಚುನಾಯಿತ ಮಹಿಳಾ ಸದಸ್ಯರನ್ನು ಉತ್ತೇಜಿಸುತ್ತಿದ್ದಾರೆ. ಸುಗ್ರಾಮದ ಪ್ರಮುಖ ಸಾಧನೆಗಳು ಈ ಕೆಳಕಂಡಂತಿವೆ:

## ಸರ್ಕಾರದ ನೀತಿಗಳ ಬಗ್ಗೆ ವಕಾಲತ್ತು

* ಗ್ರಾಮಪಂಚಾಯತಿಗಳಲ್ಲಿ ಸ್ಥಾಯಿ ಸಮಿತಿಗಳ ರಚನೆ, ಗೌರವಧನ ಮತ್ತು ಸಭಾಭತ್ಯೆಗಳು ಸಂದಾಯವಾಗದಿರುವಂತಹ ಸಮಸ್ಯೆಗಳನ್ನು ಪರಿಹರಿಸುವುದು
* ಪಂಚಾಯತಿ ಅಧ್ಯಕ್ಷರ ಅವಧಿಯನ್ನು ಬದಲಾವಣೆ ಮಾಡುವ ಕುರಿತು (ಕರ್ನಾಟಕ ಸರ್ಕಾರವು ಅವಧಿಯನ್ನು ಹೆಚ್ಚಿಸುವ ಕುರಿತು ಪರಿಗಣಿಸುತ್ತಿದೆ)



ಗೌರಿಬಿದನೂರಿನಲ್ಲಿ ಆಯೋಜಿಸಲಾದ ತಾಲ್ಲೂಕು ಸುಗ್ರಾಮದ ಸಭೆ

- ಸ್ಥಳೀಯ ಸರ್ಕಾರಗಳಲ್ಲಿ ಮಹಿಳೆಯರಿಗೆ ಶೇಕಡಾ 50 ರಷ್ಟು ಮೀಸಲಾತಿ

## ಉತ್ತಮ ಆಡಳಿತಕ್ಕೆ ಉತ್ತೇಜನ ನೀಡುವುದು ಮತ್ತು ಹೊಣೆಗಾರಿಕೆ

- ಗ್ರಾಮ ಪಂಚಾಯತಿಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ
- ವಸತಿ ಮತ್ತು ಪಿಂಚಣಿ ಯೋಜನೆಗಳಿಗೆ ಅರ್ಹತಾನುಸಾರವಾಗಿ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡುವುದು
- ಸ್ಥಳೀಯ ಮಕ್ಕಳ ಶಿಶುವಿಹಾರಗಳು-ಅಂಗನವಾಡಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದನ್ನು ಖಾತ್ರಿಪಡಿಸುವುದು
- ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿವೀಕ್ಷಿಸುವುದು

## ಪರಿವರ್ತಕರಾಗುವ ನಿಟ್ಟಿನಲ್ಲಿ ಸದಸ್ಯರಿಗೆ ಬೆಂಬಲ ನೀಡುವುದು

- ಆರೋಗ್ಯ, ಶಿಕ್ಷಣ, ನೀರು ಮತ್ತು ನೈರ್ಮಲ್ಯ ಮತ್ತು ಬಡತನ ನಿವಾರಣೆ ಯಂತಹ ಸಾಮಾಜಿಕ ಭದ್ರತೆ ನೀಡುವ ಸರ್ಕಾರಿ ಯೋಜನೆಗಳು ಮತ್ತು ಇತರೆ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಖಾತ್ರಿ ಪಡಿಸುವುದು
- ಸಮುದಾಯದಲ್ಲಿರುವ ವೃದ್ಧರು ಮತ್ತು ಹೆಣ್ಣುಮಕ್ಕಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡುವುದು
- ಗ್ರಾಮ ಪಂಚಾಯತಿಯಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಯ್ದುಕೊಳ್ಳುವುದು

## ಲಿಂಗತ್ವ ಹಾಗೂ ಸಾಮಾಜಿಕ ನ್ಯಾಯ

- ಮನೆ ಮತ್ತು ಕಾರ್ಯಸ್ಥಳಗಳಲ್ಲಿ ಮಹಿಳೆಯರ ಮೇಲಿನ ಹಿಂಸೆಗಳನ್ನು ತಡೆಯುವುದು ಮತ್ತು ಅರಿವು ಮೂಡಿಸುವುದು
- ಲಿಂಗಾಧಾರಿತ ಭ್ರೂಣ ಹತ್ಯೆ ತಡೆ ಅಭಿಯಾನ ಮತ್ತು ಬಾಲ್ಯ ವಿವಾಹವನ್ನು ತಡೆಗಟ್ಟುವುದು
- ರಾಜ್ಯ ಮಹಿಳಾ ಆಯೋಗ/ಸಹಾಯವಾಣಿಗಳೊಂದಿಗೆ ನಿಯಮಿತವಾಗಿ ಸಂವಾದ ಮತ್ತು ಸಂಯೋಜನೆ ನಡೆಸುವುದು

ಸುಗ್ರಾಮವು ಇಂದು ತಾನು ಕಾರ್ಯನಿರ್ವಹಿಸುತ್ತವ ಜಿಲ್ಲೆ/ತಾಲ್ಲೂಕಿನಲ್ಲಿ ಗುರುತಿಸಲಾಗುತ್ತಿದ್ದು, ಸುಗ್ರಾಮದ ಸದಸ್ಯರಾಗಿ ಚುನಾಯಿತ ಮಹಿಳೆಯರು ತಮ್ಮ ನಾಯಕತ್ವವನ್ನು ಬಲಪಡಿಸಿಕೊಂಡಿರುವರಲ್ಲದೇ, ಮಾದರಿ ಗ್ರಾಮ ಪಂಚಾಯತಿಯನ್ನಾಗಿ ತಮ್ಮ ಪಂಚಾಯತಿಯನ್ನು ಮಾಡಬೇಕೆನ್ನುವ ಕನಸನ್ನು ನನಸಾಗಿಸುವತ್ತ ಕಾರ್ಯನಿರತರಾಗಿದ್ದಾರೆ.

ಚುನಾಯಿತ ಮಹಿಳಾ ಸದಸ್ಯರನ್ನೊಳಗೊಂಡ ಸುಗ್ರಾಮವನ್ನು ರಚಿಸುವಲ್ಲಿ ದಿ ಹಂಗರ್ ಪ್ರಾಜೆಕ್ಟ್ ಸಂಸ್ಥೆಯು ಪ್ರಮುಖವಾದ ಪಾತ್ರವನ್ನು ವಹಿಸಿದೆ.

ಸುಗ್ರಾಮದ ಬಗ್ಗೆ ಹೆಚ್ಚಿನ ಮಾಹಿತಿಗೆ ಮತ್ತು ಸುಗ್ರಾಮದ ಸದಸ್ಯತ್ವವನ್ನು ಪಡೆಯಲು, ಸಂಪರ್ಕಿಸಿ:

**ಸುಗ್ರಾಮ – ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ – ಕರ್ನಾಟಕ**

ವಿಳಾಸ: c/o ದಿ ಹಂಗರ್ ಪ್ರಾಜೆಕ್ಟ್, ನಂ. 4, 2ನೇ ಮಹಡಿ, ಬರ್ಲಿ ಅಡ್ಡರಸ್ತೆ, ಲಾಂಗ್ ಫರ್ಡ್ ಟೌನ್, ಶಾಂತಿನಗರ, ಬೆಂಗಳೂರು – 560 025.

ಶ್ರೀಮತಿ. ಎಂ. ರೇಣುಕ, ಅಧ್ಯಕ್ಷರು – 9972261319,

ಶ್ರೀಮತಿ. ಸುನೀತ ಜಗದೀಶ್, ಕಾರ್ಯದರ್ಶಿ – 9611063639 ಅಥವಾ

ಶ್ರೀಮತಿ. ಪದ್ಮಿನಿ ಅನಂತ್, ನಿರ್ದೇಶಕರು – 7847815159,

ಅಂತರ್ಜಾಲ: www.sugrama.org